# ನಭಾ ನೂತನ ಯಾನ

ಕನ್ನಡದ 'ವಜ್ರಕಾಯ' ಸಿನಿಮಾದಿಂದ ತಮ್ಮ ಸಿನಿ ಬದುಕು ಆರಂಭಿಸಿದ್ದ ನಟಿ ನಭಾ ನಟೇಶ್, ಈಚೆಗೆ ಚಿತ್ರರಂಗದಿಂದ ಸ್ವಲ್ಪ ದೂರವುಳಿದಿದ್ದರು. ಇದೀಗ ಆ ಪುಟ್ಟ ಬ್ರೇಕ್‌ನಿಂದ ಹೊರಬಂದಿದ್ದು, ಮತ್ತೆ ಸಿನಿಮಾಗಳಲ್ಲಿ ನಟಿಸುವ ಇಂಗಿತವನ್ನು ನೂತನ ಫೋಟೊಶೂಟ್ ಮೂಲಕ ವ್ಯಕ್ತಪಡಿಸಿದ್ದಾರೆ.

2022ರಲ್ಲಿ ಅಪಘಾತಕ್ಕೆ ಈಡಾಗಿದ್ದ ನಭಾ ನಟೇಶ್ ಅವರ ಎಡ ಭುಜಕ್ಕೆ ಗಂಭೀರ ಪೆಟ್ಟು ಬಿದ್ದಿತ್ತು. ಸರಣಿ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಳ್ಳಲಾಗಿತ್ತು. ಈ ಅಪಘಾತದ ಅನುಭವಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ನಭಾ, ಶಸ್ತ್ರಚಿಕಿತ್ಸೆಯ ನೋವಿನ ಕುರಿತೂ ಮಾತನಾಡಿದ್ದರು.

ಅಪಘಾತದಿಂದಾಗಿ ತಮ್ಮ ಊಹೆಗೂ ನಿಲುಕದಂಥ ದೈಹಿಕ, ಮಾನಸಿಕ ಆಘಾತ ಅನುಭವಿಸಿದ್ದಾಗಿ ಹೇಳಿಕೊಂಡಿದ್ದರು. 'ಈಗ ನಾನು ಸಂಪೂರ್ಣ ಚೇತರಿಸಿಕೊಂಡಿದ್ದೇನೆ. ಮತ್ತೆ ಬರುತ್ತೇನೆ, ಇನ್ನಷ್ಟು ಗಟ್ಟಿಯಾಗಿ ನಿಲ್ಲುತ್ತೇನೆ' ಎಂದು ಈ ವರ್ಷದ ಆರಂಭದಲ್ಲಿ ಆತ್ಮವಿಶ್ವಾಸದಿಂದ ನುಡಿದಿದ್ದರು. ಶೀಘ್ರವೇ ಶೂಟಿಂಗ್ ಶುರು ಮಾಡುವುದಾಗಿ ಕೆಲ ದಿನಗಳ ಹಿಂದಷ್ಟೇ ತಿಳಿಸಿದ್ದರು.

ಇದೀಗ ಆ ಮಾತಿಗೆ ಮುನ್ನುಡಿಯೆಂಬಂತೆ, ನಭಾ ನಟೇಶ್ ಗ್ಲಾಮರಸ್ ಆಗಿ ಕಾಣಿಸಿಕೊಂಡು ಫೋಟೊಶೂಟ್ ಮಾಡಿಸಿದ್ದಾರೆ. ಈ ಮೂಲಕ ಸಿನಿಮಾಗಳಲ್ಲಿ ತೊಡಗಿಕೊಳ್ಳುವ ಸೂಚನೆ ನೀಡಿದ್ದಾರೆ.

'ವಜ್ರಕಾಯ' ಸಿನಿಮಾ ಮೂಲಕ ಕನ್ನಡಿಗರ ಮನಸ್ಸು ಗೆದ್ದಿದ್ದ ನಭಾ ನಟೇಶ್, ತೆಲುಗಿನಲ್ಲೂ ಜನಪ್ರಿಯತೆ ಗಳಿಸಿದರು. 2019ರಲ್ಲಿ ಬಿಡುಗಡೆಯಾದ ತೆಲುಗಿನ 'ಇಸ್ಮಾರ್ಟ್ ಶಂಕರ್' ಸಿನಿಮಾ ಅವರಿಗೆ ದೊಡ್ಡ ಬ್ರೇಕ್ ತಂದುಕೊಟ್ಟಿತ್ತು. ಆದರೆ 2021ರ ನಂತರ ಅವರು ಯಾವುದೇ ಸಿನಿಮಾಗಳಲ್ಲಿ ತೊಡಗಿಕೊಂಡಿರಲಿಲ್ಲ. ಇದೀಗ ಮತ್ತೆ ತಮ್ಮ ಬಣ್ಣದ ಕನಸುಗಳನ್ನು ನನಸು ಮಾಡಿಕೊಳ್ಳಲು ಹೊರಟಿದ್ದಾರೆ ನಭಾ.

